## 36

# “ನೀನು ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ?”

## (21:1-25)

ಆಕ್ಸಿಡ್ ಪೇಪರ್ ಒಂದು ಅದ್ಭುತಕರವಾದ ಉತ್ಪಾದನೆಯಾಗಿದ್ದು, ಯುನೈಟೆಡ್ ಸ್ಟೇಟ್ಸ್‌ದಲ್ಲಿ ಪ್ರತಿಯೊಬ್ಬ ಸೆಕ್ರೆಟರಿಯ ಡೆಸ್ಕಿನಲ್ಲಿ ಕಂಡುಬರುತ್ತದೆ. ಅದು ಒಂದು ಮಸಿಯಂಥ ಉತ್ಪಾದನೆಯಾಗಿದ್ದು ಚಿಕ್ಕ ಬಾಟಲಿನಲ್ಲಿ ಬರುತ್ತದೆ. ತಪ್ಪುಗಳನ್ನು ಮುಚ್ಚಲಿಕ್ಕೆ ಚಿಕ್ಕ ಬ್ರಶ್‌ದಿಂದ ಹಚ್ಚಲ್ಪಡುತ್ತದೆ. ಪುಟದ ಮೇಲೆ ತಪ್ಪಾದ ಅಕ್ಷರಗಳ ಪದ ಇಲ್ಲವೇ ಕಲೆಯು ಕಾಣಿಸಿಕೊಂಡರೆ, ಆಕ್ಸಿಡ್ ಪೇಪರ್ ಅದರ ಮೇಲೆ ಹಚ್ಚಲ್ಪಡುತ್ತದೆ. ಮತ್ತು ಸಮಸ್ಯೆಯು ಕಾಣೆಯಾಗಿರುತ್ತದೆ. ನಮ್ಮ ತಪ್ಪುಗಳ ಪುರಾವೆಯನ್ನು ತೆಗೆದು ಹಾಕುವಂಥ ಆಕ್ಸಿಡ್ ಪೇಪರ್ ನಮ್ಮ ಜೀವಿತಗಳಿಗಾಗಿ ಇರುವುದು ಅದ್ಭುತಕರವಾದದ್ದಾಗಿರುತ್ತದಲ್ಲವೇ? ನಮ್ಮೆಲ್ಲರಿಗೂ ಅದರ ಅಗತ್ಯತೆಯಿರುವುದು ದುಃಖಕರವಾದ ಸತ್ಯವಾಗಿರುತ್ತದೆ. ಯೋಹಾನನ ಸುವಾರ್ತೆಯ ಅಂತಿಮ ಅಧ್ಯಾಯವು ನಾವು ಸೋತು ಹೋದಾಗ ಮತ್ತು ನಮ್ಮ ಜೀವಿತಗಳಲ್ಲಿ “ಆತ್ಮಿಕ ಆಕ್ಸಿಡ್ ಪೇಪರಿನ” ಅಗತ್ಯತೆಯಿರುವಾಗ ನಾವು ಒಂದು ನೂತನ ಪ್ರಾರಂಭವನ್ನು ಅನುಭವಿಸುವ ಮಾರ್ಗವನ್ನು ವಿವರಿಸುತ್ತದೆ.

### ಹಿನ್ನೆಲೆ (21:1-14)

ಪುನರುತ್ಥಾನದ ನಂತರ ಮತ್ತು ದಿವಾರೋಹಣಕ್ಕಿಂತ ಕೆಲ ಸಮಯ ಮೊದಲು, ಯೇಸುವು ತನ್ನ ಕೆಲವು ಶಿಷ್ಯರಿಗೆ ಪುನಃ ಕಾಣಿಸಿಕೊಂಡನು. ಅವರಲ್ಲಿ ಏಳು ಜನರು ಗಲಿಲಾಯ ಸಮುದ್ರದ ಸುತ್ತಲಿನ ಪ್ರದೇಶದಲ್ಲಿಯ ತಮ್ಮ ಮನೆಗೆ (ತಿಬೇರಿಯ ಸಮುದ್ರ) ಹಿಂದಿರುಗಿ ಹೋಗಿದ್ದರು. ಪೇತ್ರನು, ನಿಶ್ಚಯವಾಗಿಯೂ ತಾನು ಯೇಸುವಿನ ನ್ಯಾಯ ವಿಚಾರಣೆಯ ರಾತ್ರಿಯಲ್ಲಿ ಆತನನ್ನು ಮೂರು ಸಲ ಅಲ್ಲಗಳೆದದ್ದಕ್ಕೆ ಇನ್ನೂ ದುಃಖಿಸುತ್ತಿದ್ದನು. “ನಾನು ಮೀನು ಹಿಡಿಯುವದಕ್ಕೆ ಹೋಗುತ್ತೇನೆ” (21:3) ಎಂದು ಹೇಳಿದನು. ಇತರರು ಅವನೊಂದಿಗೆ ಬಂದರು ಮತ್ತು ಒಂದು ಮೀನನ್ನೂ ಹಿಡಿಯದೇ ಸಮುದ್ರದ ಮೇಲೆ ಇಡೀ ರಾತ್ರಿಯನ್ನು ಕಳೆದರು. ಮರುದಿನ ಬೆಳಗಾಗುತ್ತಿರುವಾಗ, ನೆರಳಿನಂತೆ ಒಬ್ಬ ವ್ಯಕ್ತಿಯು ದಢದಲ್ಲಿ ಕಾಣಿಸಿಕೊಂಡು, “ಮಕ್ಕಳಿರಾ ಊಟಕ್ಕೆ ನಿಮಗೆ ಏನೂ ಇಲ್ಲವೇ?” (21:5) ಎಂದು ಕೇಳಿದನು. ಆತನು ಯೇಸುವೆಂದು ಗುರುತಿಸದೇ, ಅವರು “ಇಲ್ಲ” ಎಂದು ಉತ್ತರ ಕೊಟ್ಟರು (21:5). ಅವರು ತಮ್ಮ ಬಲೆಗಳನ್ನು ಬಲಗಡೆಯಲ್ಲಿ ಎಸೆದರೆ ಮೀನು ಸಿಕ್ಕುವುದೆಂದು ಆ ಅಪರಿಚಿತನು ಹೇಳಿದನು. ಯಾವುದೋ ಕಾರಣಕ್ಕಾಗಿ ಅವರು ಅಪರಿಚಿತನು ಹೇಳಿದಂತೆ ಮಾಡಿದರು.

ಅವರು ಬಲೆಯನ್ನು ಎಳೆದಾಗ ಅವರಿಗೆ ಹಾಗೆ ಮಾಡಲಿಕ್ಕೆ ಆಗಲಿಲ್ಲ ಯಾಕಂದರೆ ಬಲೆಗಳು ಮೀನುಗಳಿಂದ ತುಂಬಿಕೊಂಡಿದ್ದವು. ಆ ಕ್ಷಣದಲ್ಲಿ ಯೋಹಾನನು ದಢದ ಮೇಲಿದ್ದ ಆ ಅಪರಿಚಿತನ ಗುರುತು ಹಿಡಿದನು. “ಅವರು ಸ್ವಾಮಿಯವರು” (21:7) ಎಂದು ಪೇತ್ರನಿಗೆ ಹೇಳಿದನು. ಯಾವಾಗಲೂ ಆಸಕ್ತಿಯಿಂದ ಇದ್ದ ಪೇತ್ರನು ತನ್ನ ಒಲ್ಲಿಯನ್ನು ಸುತ್ತಿಕೊಂಡು ಸಮುದ್ರದೊಳಗೆ ಧುಮುಕಿದನು ಇನ್ನೂರು ಮೊಳ ದೂರದಲ್ಲಿದ್ದ ದಢಕ್ಕೆ ಈಜಿಕೊಂಡು ಬಂದನು. ಇತರ ಶಿಷ್ಯರು ತಮ್ಮ ಮೀನುಗಳೊಂದಿಗೆ ದಢವನ್ನು ತಲುಪಿದಾಗ, ಯೇಸುವು ಕೆಂಡಗಳನ್ನು ಹೊತ್ತಿಸಿ, ಅವರ ಉಪಹಾರಕ್ಕಾಗಿ ರೊಟ್ಟಿ ಮತ್ತು ಮೀನನ್ನು ಸಿದ್ಧಪಡಿಸಿದನ್ನು ಕಂಡುಕೊಂಡನು. ಅನಂತರ

ಸಂಭವಿಸಿದ್ದರ ಬೆಳಕಿನಲ್ಲಿ ಅದು ಮಹತ್ವದ್ದಾಗಿದೆ. ಯೋಹಾನನ ಸುವಾರ್ತೆಯಲ್ಲಿ ಬೆಂಕಿಯ ಬಗ್ಗೆ ಇನ್ನೊಂದು ಸಲ ನಮೂದಿಸಲ್ಪಟ್ಟಿರುವುದು ಪೇತ್ರನು ಯೇಸುವನ್ನು ಅಲ್ಲಗಳೆದ ರಾತ್ರಿಯಲ್ಲಿ ತನ್ನನ್ನು ಕಾಯಿಸಿಕೊಳ್ಳುತ್ತಿದ್ದಾಗ (18:18).

ಯೇಸುವು ಶಿಷ್ಯರಿಗೆ ಬಂದು ಊಟಮಾಡಿರಿ ಎಂದು ಹೇಳಿದನು. ಅವರೆಲ್ಲರೂ ಊಟಮಾಡಿದರು. ಆಹಾರವನ್ನು ಅವರು ಗಮನಿಸಿರಲಿಕ್ಕಿಲ್ಲ ಆದರೆ ಅವರು ಊಟ ಮಾಡುತ್ತಿರುವಾಗ ಆತಂಕದ ಮೌನವಿತ್ತು. ಯಾವಾನಾದರೂ ಸತ್ತು ಹೋದವನು ಜೀವದಿಂದ ಹಿಂದಿರುಗಿ ಬಂದರೆ ನೀವು ಏನು ಹೇಳುವಿರಿ? ದೇವರ ಕುಮಾರನು ನಿಮಗೆ ಬೆಳಗಿನ ಉಪಹಾರ ಊಟಮಾಡಿಸುತ್ತಿದ್ದಾಗ, ಮಾತನಾಡಲಿಕ್ಕೆ ಸಾಧ್ಯವಾದ ಮಹತ್ವದ್ದು ಯಾವುದಾಗಿರುವುದು?

## ಸಂಧಿಸುವಿಕೆ (21:15)

ಶಿಷ್ಯರು ತಮ್ಮ ಊಟವನ್ನು ಮುಗಿಸುತ್ತಿದ್ದಂತೆ, ಯೇಸುವು ಪೇತ್ರನ ಕಡೆಗೆ ತಿರುಗಿ ಕೊಂಡು ಪೇತ್ರನು ಬಹಳವಾಗಿ ಭಯಪಟ್ಟಂಥ ಮತ್ತು ಕೇಳಲು ಅವನಗೆ ಅಗತ್ಯವಾ ದಂಥ ಪ್ರಶ್ನೆಯನ್ನು ಕೇಳಿದನು: "ಯೋಹಾನನ ಮಗನಾದ ಸೀಮೋನನೇ, ನೀನು ಇವರಿಗಿಂತ ಹೆಚ್ಚಾಗಿ ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ?" (21:15) ಆ ಸರಳವಾದ ಪ್ರಶ್ನೆಯೊಂದಿಗೆ ಯೇಸುವು ಪೇತ್ರನ ಪಾಪವನ್ನು ಬಹಿರಂಗ ಪಡಿಸಿದನು ಮತ್ತು ಪೇತ್ರನ ಪ್ರಾಣವನ್ನು ಕೊಲ್ಲಲು ಭಯಪಡಿಸಿದ ಆತ್ಮಿಕ ಗಾಯವನ್ನು ತೆರೆದನು. ಪೇತ್ರನ ಪಾಪವು ನೇರವಾಗಿ ಎದುರಿಸಲ್ಪಡದಿದ್ದರೆ, ಮಾನಸಾಂತರಪಡದಿದ್ದರೆ, ಮತ್ತು ಕ್ಷಮಿಸಲ್ಪಡದಿದ್ದರೆ, ದೊಡ್ಡ ಅಪೊಸ್ತಲನಾದ ಪೇತ್ರನು ತನ್ನ ಉಳಿದ ಜೀವಿತವನ್ನು ಕೇವಲ ಇನ್ನೊಬ್ಬ ಗಲಿಲಾಯದ ಬೆಸ್ತನಂತೆ ನೋವಿನಿಂದಲೂ ಮುರಿಯಲ್ಪಟ್ಟವನಾಗಿಯೂ ಜೀವಿಸಬೇಕಾಗುತ್ತಿತ್ತು. ಆ ರೀತಿ ಸಂಭವಿಸದಂತೆ ಯೇಸುವು ಅವನನ್ನು ಬಹಳವಾಗಿ ಪ್ರೀತಿಸಿದನು.

ನಮ್ಮ ಪಾಪಗಳನ್ನು ಮುಚ್ಚಿಡಲು ಮತ್ತು ನಮ್ಮ ಅಪರಾಧವನ್ನು ಅಲ್ಲಗಳೆಯಲು ಹೇಗೆ ಪ್ರಯತ್ನಿಸುವುದು ವಿಚಿತ್ರವಾದದ್ದಾಗಿದೆ. ಜನರು ಯಾವಾಗಲೂ ಅದನ್ನು ಮಾಡಿದ್ದಾರೆ, ಆದಾಗ್ಯೂ ಅದು ಯಾರಿಗೂ ಎಂದೂ ಯಾವುದೇ ಒಳ್ಳೆಯದನ್ನು ಮಾಡಿರುವದಿಲ್ಲ. ಪಾಪವನ್ನು ತಪ್ಪಿಸಿಕೊಳ್ಳುವದರ ಬದಲು, ಅದು ಅಸ್ತಿತ್ವದಲ್ಲಿ ಇರುವದಿಲ್ಲವೆಂದು ನಟಿಸುವದರಿಂದ ಪಾಪಕ್ಕೆ ಹೆಚ್ಚಿನ ಬಲವನ್ನು ಕೊಡುವದರಿಂದ ನಾವು ನಿಜವಾಗಿ ಅಂತ್ಯಗೊಂಡಿದ್ದೇವೆ.

ವಾಲ್ಡ್ ಡಿಸ್ನೆಯವರ *"ದ ಲಯನ್ ಕಿಂಗ್"* ಎಂಬ ಚಲನ ಚಿತ್ರವು ಅಪರಾಧದ ಮತ್ತು ನಾಚಿಕೆಯಲ್ಲಿ ಒಂದು ಅಧ್ಯಯನವಾಗಿದೆ ಅದು ಸಿಂಬಾ ಎಂಬ ಸಿಂಹದ ಕಥೆಯಾಗಿದೆ. ಕಾಡುಮೃಗಗಳ ತುಳಿತಕ್ಕೆ ಬಲಿಯಾಗಿ ಅದರ ತಂದೆ ಕೊಲ್ಲಲ್ಪಟ್ಟಿತ್ತು. ಸಿಂಬಾನ ದುಷ್ಟ ಚಿಕ್ಕಪ್ಪನು ಒಬ್ಬ ಹೇಡಿಯು, ಅದರ ಹೆಸರು ಸ್ಕಾರ ಎಂದು. ಅದು ಗರ್ವದ ಮುಂದಿನ ಅರಸನಾಗಲು ಬಯಸಿತ್ತು; ಆದರೆ ಯುವ ಸಿಂಬಾ ಕಾಣೆಯಾದರೆ ಮಾತ್ರವೇ ತಾನು ಹಾಗೆ ಆಗಬಹುದೆಂದು ಅದಕ್ಕೆ ತಿಳಿದಿತ್ತು. ಅಡಗಿಸಿಟ್ಟ ಪಾಪದ ಬಲವನ್ನು ತಿಳಿದುಕೊಂಡ ಸ್ಕಾರ, ಮೊದಲು "ನೀನು ಏನು ಮಾಡಿದ್ದಿ? ನಿನ್ನ ತಾಯಿ ಏನೆಂದು ಯೋಚಿಸುವಳು?" ಎಂದು ಸಿಂಬಾನಿಗೆ ಕೇಳುವದರಿಂದ ಅದರ ತಂದೆಯ ಮರಣಕ್ಕೆ ಸಿಂಬಾನು ಕಾರಣವೆಂದು ತೋರಿ ಸಲು ಪ್ರಯತ್ನಿಸಿತು. ಆಗ ಸಿಂಬಾ ತಾನು ಏನು ಮಾಡಬೇಕೆಂದು ಕೇಳಿದಾಗ, ಸ್ಕಾರ, "ಓಡಿಹೋಗು" ಎಂದು ಹೇಳಿತು. ಅದು ಹಾಗೆ ಮಾಡಿತು.

ತನ್ನ ಅಪರಾಧ ಮನೋಭಾವನೆಯಿಂದ ದೂರದಲ್ಲಿ ಓಡುತ್ತ ವರ್ಷಗಳನ್ನು ಕಳೆದ ನಂತರ, ಸಿಂಬಾ ಧೈರ್ಯ ಪಡೆದುಕೊಂಡು ಹಿಂದಿನದನ್ನು ಎದುರಿಸಲು ತನ್ನ ಸ್ವಂತ ಸ್ಥಳಕ್ಕೆ ಹಿಂದಿರುಗಿತು, ಒಮ್ಮೆ ಅಲ್ಲಿದ್ದಾಗ ಅದು ತನ್ನ ಕುಂಟುಂಬವನ್ನು ರಕ್ಷಿಸಲು ಮತ್ತು ತನ್ನ ತಂದೆಯ ರಾಜ್ಯದಲ್ಲಿ ನ್ಯಾಯವನ್ನು ಪುನಃ ಸ್ಥಾಪಿಸಲು ಶಕ್ತವಾಯಿತು.

ಸಿಂಬಾನನ್ನು ಅಪರಾಧಿ ಮನೋಭಾವನೆಯಿಂದ ಓಡಿಹೋಗುವಂತೆ ಮಾಡಿರುವವರಿಗೆ, ಅದಕ್ಕೆ ಸ್ಕಾರನಿಗೆ ಸಿಂಬಾನ ಮೇಲೆ ನಿಯಂತ್ರಣವಿತ್ತು. ಸಿಂಬಾ ಸತ್ಯವನ್ನು ಎದುರಿಸಿದಾಗ ಮಾತ್ರವೇ ತನ್ನ ಸ್ವಾತಂತ್ರ್ಯವನ್ನು ಕಂಡು ಕೊಂಡಿತು (8:32).

ಪಾಪದ ಬಚ್ಚಿಡಲ್ಪಟ್ಟ ಶಕ್ತಿಯು ನತಾನಿಯೇಲ ಹಾತ್ರೋನನ ಕಾದಂಬರಿ "ದ ಸ್ಕಾರಲೇಟ್ ಲೆಟರ್"ದ ಮುಖ್ಯ ಪ್ರಸ್ತಾಪವಾಗಿತ್ತು. ಪ್ಯುರಿಟನ್ ನ್ಯೂ ಇಂಗ್ಲಡ್‌ದ ಹಿನ್ನೆಲೆಯಲ್ಲಿದ್ದು, ತನ್ನಗಂಡನ ಅನುಪಸ್ಥಿತಿಯಲ್ಲಿ ಗರ್ಭಧರಿಸಿದ ಹೆಸ್ಟರ ಪೇಯ್ನ ಎಂಬ ಹೆಸರಿನ ಮಹಿಳೆಯ ಕಥೆ ಇದಾಗಿದೆ. ಆಕೆಯ ಅಪನಂಬಿಕೆಯನ್ನು ಚರ್ಚಿಸಲು ಮತ್ತು ಆಕೆಗೆ ಶಿಕ್ಷೆಯನ್ನು ವಿಧಿಸಲು ಸಮಾದಲ್ಲಿ ಬಹಿರಂಗ ನ್ಯಾಯವಿಚಾರಣೆ ಜರುಗಿತು. ಕೂಸಿನ ತಂದೆಯನ್ನು ಗುರುತಿಸಲು ಗ್ರಾಮದ ಹಿರಿಯರು ಹೆಸ್ಟರಳನ್ನು ಒತ್ತಾಯ ಪಡಿಸಿದರೂ ಆಕೆ ಹಟಮಾರಿತನದಿಂದ ನಿರಾಕರಿಸಿದಳು. ಆಕೆಯ ಶಿಕ್ಷೆಯು ಆಕೆ ತನ್ನ ಉಡುಪಿನ ಮುಂಭಾಗದಲ್ಲಿ ಕಡುಗೆಂಪು ಬಣ್ಣದ "ಎ" ("ವ್ಯಭಿಚಾರಕ್ಕಾಗಿ") ಅಕ್ಷರವನ್ನು ಹೋಲಿಸು ಆ ಉಡುಪನ್ನು ಆಕೆ ಬಹಿರಂಗವಾಗಿ ಹೊರಗೆ ಹೋಗುವ ಪ್ರತಿಯೊಂದು ಸಲ ಧರಿಸಬೇಕಾಗಿತ್ತು. ಮೊದಲನೆಯ ಸಲ ಆಕೆ ಅದನ್ನು ಧರಿಸಿದಾಗ, ಪಟ್ಟಣದ ಮಧ್ಯದಲ್ಲಿಯ ಗಲ್ಲಿಗೇರಿಸುವ ಬಹಿರಂಗ ಕಟ್ಟೆಯ ಮೇಲೆ ತಾಸುಗಳ ವರೆಗೆ ನಿಂತು ಕೊಳ್ಳಬೇಕಾತಿತ್ತು. ಅದು ಆಕೆಗೆ ಭಯಂಕರವಾದ, ವೇದನೆಯ ತೀರ್ಪಾಗಿತ್ತು. ಆದರೆ ಆಕೆ ತನ್ನ ಶಿಕ್ಷೆಯನ್ನು ಸ್ವೀಕರಿಸುತ್ತಾಳೆ ಮತ್ತು ತನ್ನ ಜೀವನದೊಂದಿಗೆ ಮುಂದುವರಿಯುತ್ತಾಳೆ.

ಕಥೆಯಲ್ಲಿ ಇನ್ನೊಬ್ಬ ವ್ಯಕ್ತಿಯು ಪ್ರಸಂಗಿ ರೊಜರ ಡಿಮ್ಮೆಸ್‌ಡೇಲ ಪ್ರತಿಯೊಬ್ಬರಿಂದಲೂ ಪ್ರೀತಿಸಲ್ಪಟ್ಟವನು  ಹಾಗೂ ಗೌರವಿಸಲ್ಪಟ್ಟನು ಡಿಮ್ಮೆಸ್‌ಡೇಲನಿಗೆ ಒಂದು ವೇದನೆಯ ರಹಸ್ಯವನ್ನು ಸಹಿಸಿಕೊಳ್ಳಬೇಕಾಗಿತ್ತು; ಅವನು ಹೆಸ್ಟರಳ ಮಗುವಿನ ತಂದೆಯಾಗಿರುತ್ತಾನೆ. ಕಥೆಯು ಮುಂದುವರಿದಂತೆ, ಡಿಮ್ಮೆಸ್‌ಡೇಲನು ಅನೇಕ ವಿಧಗಳಲ್ಲಿ ತನ್ನ ಪಾಪದ ಅಪರಾಧವನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಅವನು ಸತತವಾಗಿ ಅಧ್ಯಯನ ಮಾಡುತ್ತಾನೆ ಮತ್ತು ಪ್ರಾರ್ಥಿಸುತ್ತಾನೆ ಮತ್ತು ಕೆಲವು ಸಲ ತನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ತನ್ನನ್ನು ಬಾರುಕೋಲಿನಿಂದ ಹೊಡೆದುಕೊ ಳ್ಳುತ್ತಾನೆ ಹೀಗಿದ್ದರೂ, ಇದಾವುದೂ ಅವನಿಗೆ ಸಹಾಯ ಮಾಡುವದಿಲ್ಲ. ಕ್ರಮೇಣವಾಗಿ ಅವನ ಆರೋಗ್ಯವು ಕೆಡುತ್ತ ಬಂದಿತು. ಈ ಇಬ್ಬರ ಕಥೆಯಲ್ಲಿ ಹೆಸ್ಟರ ಮುರಿದ ಸ್ತ್ರೀಯಾಗಿ ಆರಂಭಿಸುತ್ತಾಳೆ ಆದರೆ ಕ್ರಮೇಣವಾಗಿ ಬಲವುಳ್ಳವಳಾಗಿ ಬೆಳೆಯುತ್ತಾಳೆ; ಡಿಮ್ಮೆಸ್ ಡೇಲ ಪಟ್ಟಣದಲ್ಲಿ ಹೆಚ್ಚು ಗೌರವಿಸಲ್ಪಟ್ಟ ಮನುಷ್ಯನಾಗಿ ಪ್ರಾರಂಭಿಸುತ್ತಾನೆ ಆದರೆ ಆತ್ಮಿಕ ಕ್ಯಾನ್ಸರ ಅವನ ಪ್ರಾಣವನ್ನು ನಾಶಪಡುಸುತ್ತಿರುವಂತೆ ನಿಧಾನವಾಗಿ ಬಲಹೀನನಾಗುತ್ತ ಹೋಗುತ್ತಾನೆ.

ಹಾಥೊರ್ನನ ಕಥೆಯಲ್ಲಿ ಒಂದು ವಿಚಿತ್ರವಾದ ಪಾತ್ರವು ರೊಜರ ಚಿಲ್ಲಿಂಗ್‌ವರ್ತ್ ಪಟ್ಟಣದ ಜನರು ಅದನ್ನು ತಿಳಿಯದಿದ್ದರೂ, ಅವನು ಹೆಸ್ಟರಳ ಅಗಲೇ ಹೋದ ಗಂಡನು. ಹೆಸ್ಟರಳ ಸಂಗಾತಿಯ ವ್ಯಭಿಚಾರದಲ್ಲಿ ಶಿಕ್ಷೆಯನ್ನು ತನ್ನ ಸ್ವಂತ ವೈಯಕ್ತಿಕ ನಿಯೋಗದಂತೆ ಅವನು ತೆಗೆದುಕೊಳ್ಳುತ್ತಾನೆ. ಬೇಗನೇ ಪ್ರಸಂಗಿಯು ಅಪರಾಧಿ ಯಾಗಿದ್ದಾನೆಂಬುದನ್ನು ತಿಳಿದುಕೊಂಡು, ಚಿಲ್ಲಿಂಗ್‌ವರ್ತನು ಅವನೊಂದಿಗೆ "ಸ್ನೇಹಿತ"ನಾಗುತ್ತಾನೆ. ಮತ್ತು ತನ್ನ ರಹಸ್ಯವನ್ನು ಮುಚ್ಚಿಡಬೇಕೆಂದು ಅನೇಕ ರೀತಿಯಲ್ಲಿ ಅವನನ್ನು ಪ್ರೋತ್ಸಾಹಿಸುತ್ತಾನೆ.

ಅಂತಿಮವಾಗಿ, ಪುಸ್ತಕದ ಮುಕ್ತಾಯದ ದೃಶ್ಯದಲ್ಲಿ, ಡಿಮ್ಮೆಸ್‌ಡೇಲನು ತನ್ನ ಜೀವನದಲ್ಲಿಯ ಅತೀ ಬಲವಾದ ಪ್ರಸಂಗವನ್ನು ಪ್ರಸಂಗಿಸುತ್ತಾನೆ ಸಭಾಕೂಟದಲ್ಲಿದ್ದವರು ದೇವಾಲಯವನ್ನು ಬಿಟ್ಟು ಹೋಗುವಾಗ, ಪಟ್ಟಣದ ಬೀದಿಗಳಲ್ಲಿ ಒಟ್ಟಾಗಿ ಹೋದರು. ಅವರು ಹೋಗುತ್ತಿದಂತೆ ವರ್ಷಗಳ ಮೊದಲು "ಎ" ಎಂಬ ಅಕ್ಷರವು ಆಕೆಯ ಉಡುಪಿಗೆ ಹೊಲೆದಂತೆ ಇದ್ದ ಉಡುಪನ್ನು ಧರಿಸಿ ಹೆಸ್ಟೆರಳು ಮರಣದಂಡನೆಯ ಕಟ್ಟೆಯ ಮೇಲೆ ನಿಂತು ಕೊಂಡಿದ್ದ ಸ್ಥಳವನ್ನು ದಾಟಿ ಹೋದರು. ನಾಚಿಕೆಯ ಆ ಸ್ಥಳದ ಹತ್ತಿರ ಡಿಮ್ಮೆಸ್‌ಡೇಲನು ನಿಂತು ಕೊಂಡನು. ಸೋತು ಹೋಗುತ್ತಿದ್ದ ತನ್ನ

ದೇಹದಲ್ಲಿ ಎಲ್ಲ ಧೈರ್ಯವನ್ನೂ ಬಲವನ್ನೂ ಒಟ್ಟುಗೂಡಿಸಿ ಹೆಸ್ಟರಳನ್ನೂ ಆಕೆಯ ಮಗುವನ್ನೂ ತನ್ನ ಬಳಿಗೆ ಬರುವಂತೆ ಕರೆದನು. ಚಿಲ್ಲಿಂಗ್‌ವರ್ತನು ಈ ರಹಸ್ಯವು ಇನ್ನೂ ಕಾಪಾಡಲ್ಪಡಬೇಕೆಂಬ ಭರವಸೆಯನ್ನು ಕೊಟ್ಟು ಅವನನ್ನು ತಡೆಯುವಂತೆ ಬೇಡಿಕೊಂಡನು.

ಹೀಗಿದ್ದರೂ, ಈ ಸಮಯದಲ್ಲಿ ಆಗಲೇ, ಡಿಮ್ಮೆಸ್‌ಡೇಲನು ಚಿಲ್ಲಿಂಗ್‌ವರ್ತನು ಪಿಶಾಚಿಯ ಸೇವಕನೆಂದು ಅರಿತು ಕೊಳ್ಳುತ್ತಾನೆ, ಆದುದರಿಂದ ಅವನು ಅವನನ್ನು ಪಕ್ಕಕ್ಕೆ ತಳ್ಳಿಬಿಡುತ್ತಾನೆ. ಆಗ ಅವನು ಮತ್ತು ಹೆಸ್ಟರ ಹಾಗೂ ಅವರ ಮಗು ಮರಣ ಶಿಕ್ಷೆಯ ಕಟ್ಟೆಯ ಮೇಲೆ ನಡೆದು ಹೋಗುತ್ತಾರೆ. ಮತ್ತು ಪ್ರಸಂಗಿಯು ಅಂತಿಮವಾಗಿ ತನ್ನ ಪಾಪದ ಬಗ್ಗೆ ಯಥಾರ್ಥನಾಗುತ್ತಾನೆ. ತಾನು ಸೋತು ಹೋದನೆಂದು ಅರಿತುಕೊಂಡು. ಚಿಲ್ಲಿಂಗ್‌ವರ್ತನು ಡಿಮ್ಮೆಸ್‌ಡೇಲುನಿಗೆ ಅವನು ಇಡೀ ಜಗತ್ತನ್ನು ಪ್ರಯಾಣಿಸಿ ಬಂದರೂ, ಅವನು ತನ್ನ ಹಿಡಿತವನ್ನು ತಪ್ಪಿಸಿಕೊಳ್ಳಲು ಸಾಧ್ಯವಾಗಿರುವ ಒಂದೇ ಸ್ಥಳವು ಅರಿಕೆಯ ಮತ್ತು ಮಾನಸಾಂತರದ ಮರಣಗಂಬದ ಕಟ್ಟೆಯ ಮೇಲೆ ಎಂದು ಹೇಳಿದನು!

ಅಷ್ಟರವರೆಗೆ ತನ್ನ ಪಾಪವನ್ನು ಬಹಿರಂಗಪಡಿಸುವದರ ಬಗ್ಗೆ ಡಿಮ್ಮೊಸ್‌ಡೇಲನು ಭಯಪಟ್ಟಿದ್ದನು. ತನ್ನ ಪಾಪವನ್ನು ಅರಿಕೆ ಮಾಡಿದ್ದರಲ್ಲಿ ಮಾತ್ರವೇ ಅವನು ಅಂತಿಮ ವಾಗಿ ಸ್ವಾತಂತ್ರ್ಯವನ್ನು ಕಂಡುಕೊಂಡನು.

32ನೆಯ ಕೀರ್ತನೆಯು ಪಾಪವನ್ನು ಎದುರಿಸುವದರ ಮತ್ತು ಪಾಪದ ಪ್ರಾಣಹಿಂಡುವ ಬಲದಿಂದ ಸ್ವಾತಂತ್ರ್ಯ ಕಂಡು ಕೊಳ್ಳುವದರ ಮಧ್ಯದಲ್ಲಿಯ ಸಂಬಂಧದ ಬಗ್ಗೆ ಮಾತಾಡುತ್ತದೆ:

> ನಾನು ನನ್ನ ಪಾಪವನ್ನು ಅರಿಕೆ ಮಾಡದೆ ಇದ್ದಾಗ, ದಿನವೆಲ್ಲಾ ನರಳುವದರಿಂದ ನನ್ನ ಎಲುಬುಗಳು ಸವೆದು ಹೋಗುತ್ತಿದ್ದವು
> ಹಗಲಿರುಳು ನೀರಿನಂತೆ ನನ್ನ ಶರೀರದ ಸಾರವೆಲ್ಲಾ ಬತ್ತಿ ಹೋಯಿತು.
> ಹೀಗಿರುವಲ್ಲಿ ಯೆಹೋವನ ಸನ್ನಿಧಿಯಲ್ಲಿ ನನ್ನ ದ್ರೋಹವನ್ನು ಒಪ್ಪಿಕೊಳ್ಳು ವೆನು ಅಂದು ಕೊಂಡು;
> ನನ್ನ ಪಾಪವನ್ನು ಮರೆಮಾಡದೆ ನಿನಗೆ ನನ್ನ ದೋಷವನ್ನು ತಿಳಿಸಿದೆನು. ನೀನು ನನ್ನ ಅಪರಾಧ ಪಾಪಗಳನ್ನು ಪರಿಹರಿಸಿ ಬಿಟ್ಟಿ ಃ(ವಚನಗಳು 3-5).

ಯೇಸುವು ಪೇತ್ರನನ್ನು ಅವನು ತನ್ನನ್ನು ಪ್ರೀತಿಸಿದನೋ ಎಂದು ಕೇಳಿದಾಗ, ಯೇಸುವು ಬಂಧಿಸಲ್ಪಡುವದಕ್ಕಿಂತ ಮೊದಲಿನ ಪೇತ್ರನ ಕೊಚ್ಚಿಕೊಳ್ಳುವಿಕೆಯ ಹಾಗೂ ತನ್ನ ವಿಚಾರಣೆಯ ಸಮಯದಲ್ಲಿ ಅವನು ಕರ್ತನನ್ನು ಭಯಕಂರವಾಗಿ ಅಲ್ಲಗಳೆದದ್ದರ ನೋವಿನ ವಿಷಯವನ್ನು ಬಹರಂಗ ಪಡಿಸಿದನು. ಈ ಕಠಿಣವಾದ ವಿಷಯವನ್ನು ತಪ್ಪಿಸಿಕೊಳ್ಳುವುದು ಸುಲಭವಾಗಿತ್ತು. ಆದರೆ ಹಾಗೆ ಮಾಡುವುದು ಪೇತ್ರನ ಅತ್ಯುತ್ತಮ ಆಸಕ್ತಿಗಾಗಿ ಇರುತ್ತಿರಲಿಲ್ಲ. ರಹಸ್ಯ ಪಾಪವು ನಾಶನಕರವಾದದ್ದಾಗಿದೆ, ಆದುದರಂದ ಯೇಸುವು ಪೇತ್ರನ ಪಾಪವನ್ನು ಬಹಿರಂಗ ಪಡಿಸಬೇಕಾಗಿತ್ತು ಮತ್ತು ನೇರವಾಗಿ ಅದ ರೊಂದಿಗೆ ವ್ಯವಹರಿಸ ಬೇಕಾಗಿತ್ತು.

## ಪುನಃ ಸ್ಥಾಪನೆ (21:15-17)

ತನ್ನನ್ನು ಪ್ರೀತಿ ಮಾಡುವಿಯೋ ಎಂದು ಯೇಸುವು ಪೇತ್ರನ ಮೂರು ಸಲ ಕೇಳಿದನು. ಈ ಮೊದಲು ಕರ್ತನನ್ನು ಅವನು ಅಲ್ಲಗಳೆದಷ್ಟು ಸಲ ಯೇಸುವಿನಲ್ಲಿ ತನ್ನ ನಂಬಿಕೆಯನ್ನು ಅರಿಕೆ ಮಾಡಲು ಅದು ಅವಕಾಶ ಕೊಡುವದಕ್ಕಾಗಿರ ಬಹುದು. ಮೊದಲು ಎರಡು ಸಲ ಯೇಸು ಈ ಪ್ರಶ್ನೆಯನ್ನು ಕೇಳಿದಾಗ, ಆತನು ಗ್ರೀಕ್ ಪದ ಅಗಾಪೆ ಎಂಬುದನ್ನು ಉಪಯೋಗಿಸಿದನು, ಅದರ ಅರ್ಥ "ದೇವರ ಪ್ರೀತಿ"[1] ಪೇತ್ರನು ಎರಡೂ ಸಲ ಫಿಲೆಓ ಎಂಬ ಗ್ರೀಕ್ ಪದದಿಂದ ಉತ್ತರ ಕೊಟ್ಟನು ಅದರ ಅರ್ಥ "ಸ್ನೇಹತ್ವದ ಪ್ರೀತಿ" ಯೇಸುವಿನ ಅಂತಿಮ ಪ್ರಶ್ನೆಯು ಫಿಲೆಓ ಎಂಬ

ಪದವನ್ನು ಉಪಯೋಗಿಸಿತು. ಮತ್ತು ಪೇತ್ರನು ಅದೇ ಪದವನ್ನು ಉಪಯೋಗಿಸಿ ಉತ್ತರ ಕೊಟ್ಟನು. ಅಗಾಪೆಯು ಪ್ರೀತಿಯ ಉನ್ನತ ರೂಪವಾಗಿದೆ, ಆದರೆ ಯೇಸುವು, ದೇವರು ಫಿಲೆಓ ಪ್ರೀತಿಯನ್ನು ಸ್ವೀಕರಿಸುವನು ಎಂದು ಹೇಳುತ್ತಿರುವನು. ಅದು ಆ ಸಮಯದಲ್ಲಿ ದೇವರಗೆ ಅರ್ಪಿಸಬಹುದಾದ ಎಲ್ಲವೂ ಆಗಿತ್ತು (ಬಹುಶಃ ಪೇತ್ರನಿಗೆ ತನ್ನಲ್ಲಿ ಅಷ್ಟು ಅಲ್ಪವಾದ ಭರವಸೆಯಿತ್ತು).

ಪಾಪದಿಂದ ಪುನಃ ಸ್ಥಾಪನೆಗೆ ಮಾರ್ಗವನ್ನು ಅರಿತುಕೊಂಡು “ನೀನು ನನ್ನನ್ನು ಪ್ರೀತಿಸುವಿಯಾ?” ಎಂದು ಯೇಸು ಕೇಳಿದ ಪ್ರಶ್ನೆಯನ್ನು ನಾವು ಗಮನಿಸತಕ್ಕದ್ದು ನಾವು ಪಾಪದಲ್ಲಿ ಬೀಳುವಾಗ, ನಿಜವಾದ ಪ್ರಶ್ನೆಯಿಂದ ಕೇವಲ ಬೇರೆ ಕಡೆಗೆ ತಿರುಗಿಸುವ ಇತರ ಅನೇಕ ಪ್ರಶ್ನೆಗಳಿಂದ ಶೋಧಿಸಲ್ಪಡುತ್ತೇನೆ. “ನನ್ನ ತಪ್ಪು ಯಾವುದು?” ಇತರರ ಪಾಪಕ್ಕಿಂತ ನನ್ನ ಪಾಪವು ಹೆಚ್ಚು ಕೆಟ್ಟದ್ದಾಗಿರುವುದೋ? “ನನ್ನ ಪಾಪದಿಂದ ಯಾವ ಹಾನಿ ಮಾಡಲ್ಪಟ್ಟಿದೆ?” ಇತರರು ನನ್ನನ್ನು ಪುನಃ ಹಿಂದಿರುಗಿ ಸ್ವೀಕರಿಸುವರೋ? “ಇದನ್ನು ಮಾಡುವಂತೆ ಯಾವುದು ಮಾಡಿತು?” ಹೀಗೆ ಪ್ರಶ್ನೆಗಳು ಮುಂದುವರಿಯುತ್ತಿರುತ್ತವೆ, ಪೇತ್ರನನ್ನು ಪುನಃ ಸ್ಥಾಪನೆಗೆ ನಡಿಸುವಲ್ಲಿ, ಯೇಸುವು ದೇವರ ಬಳಿಗೆ ಹಿಂದಿರುಗುವದಕ್ಕೆ ಅತೀ ಮಹತ್ವದ ವಿಷಯವು “ನೀನು ನನ್ನನ್ನು ಪ್ರೀತಿಸುವಿಯೋ?” ಎಂಬ ಪ್ರಶ್ನೆಯಾಗಿದೆ ಎಂದು ಪ್ರದರ್ಶಿಸಿದನು. ಆತನ ರಾಜ್ಯದಲ್ಲಿ ಕೆಲಸ ಮಾಡಲು ಹಿಂದಿರುಗ ಬೇಕೆಂದು ಬಯಸುತ್ತಾನೆ.

ಪ್ರತಿಯೊಂದು ಸಲ ಪೇತ್ರನು ಯೇಸುವಿನ ಪ್ರಶ್ನೆಗೆ ಉತ್ತರಕೊಟ್ಟಾಗ, ಯೇಸುವು ಅವನಿಗೆ ಒಂದು ಸೇವೆಯ ಆಜ್ಞೆಕೊಟ್ಟನು. “ನನ್ನ ಕುರಿಗಳನ್ನು ಮೇಯಿಸು” (21:15), “ನನ್ನ ಕುರಿಗಳನ್ನು ಕಾಯಿ” (21:16), ಮತ್ತು “ನನ್ನ ಕುರಿಗಳನ್ನು ಮೇಯಿಸು” (21:17) ಎಂದು ಆತನು ಹೇಳಿದನು. ಪೇತ್ರನನ್ನು ಆತನು ಕ್ಷಮಿಸಿದ್ದು ಭಾಗಶಃವಾಗಿರಲಿಲ್ಲ, ಪೇತ್ರನು ತನ್ನ ಪಾಪವನ್ನು ದಾಟಿ ಹೋಗಬೇಕಾಗಿತ್ತು ಮತ್ತು ಪುನಃ ಯೇಸುವಿನ ಅಪೊಸ್ತಲನಾಗಿ ತನ್ನ ಸ್ಥಾನ ತೆಗೆದುಕೊಳ್ಳಬೇಕಾಗಿತ್ತು. ಇಂದು ನಾವು ನಮ್ಮ ಪಾಪಗಳಿಂದ ಹಿಂದಿರುಗುವಾಗ, ನಾವು ಅದನ್ನೆ ಮಾಡಬೇಕೆಂದು ಯೇಸುವು ಬಯಸುತ್ತಾನೆ!

## ಆಮಂತ್ರಣ (21:19)

ಪೇತ್ರನ ಪುನಃ ಸ್ಥಾಪನೆಯಲ್ಲಿ ಅಂತಿಮ ಹಂತವು “ನನ್ನನ್ನು ಹಿಂಬಾಲಿಸು!” (21:19) ಎಂಬ ಅಂತಿಮ ಯೇಸುವಿನ ಮಾತುಗಳಿಂದ ಬಂದಿತು. ಯೇಸುವು ತನ್ನ ಭೂಲೋಕದ ಸೇವೆಯ ಪ್ರಾರಂಭದಲ್ಲಿ ತನ್ನ ಶಿಷ್ಯರನ್ನು ಕರೆಯಲು ಆತನು ಇದೇ ಮಾತುಗಳನ್ನು ಉಪಯೋಗಿಸಿದ್ದನು, ಮತ್ತು ಸಮುದ್ರ ದಢದಲ್ಲಿ ಆ ಪ್ರಾತಃಕ್ಕಾಲ ಪೇತ್ರನೊಂದಿಗಿನ ತನ್ನ ಸಂದರ್ಶನದ ಅಂತ್ಯದಲ್ಲಿ ಆತನು ಅದೇ ಮಾತುಗಳನ್ನು ಉಪಯೋಗಿಸಿದ್ದನು, “ನನ್ನನ್ನು ಹಿಂಬಾಲಿಸು!” ಎಂಬುದು ನಮ್ಮನ್ನು ಒಳಗೊಂಡು ತನ್ನ ಶಿಷ್ಯರನ್ನು ಯೇಸುವು ಕರೆಯುವದರ ತಿರುಳಾಗಿರುತ್ತದೆ. “ನನ್ನನ್ನು ಹಿಂಬಾಲಿಸು!” ಎಂಬುದು ಬೆಳವಣಿಗೆಯ ಮಟ್ಟವನ್ನು ವಿವರಿಸುವದಿಲ್ಲ; ಅದು ಒಂದು ದಿಕ್ಕನ್ನು ತೋರಿಸುತ್ತದೆ. ಅದು ನಮ್ಮ ಹಿಂದಿನಕ್ಕಾಗಲೀ, ಇಲ್ಲವೇ ಇತರ ಶಿಷ್ಯರೊಂದಿಗೆ ಹೋಲಿಕೆಯೊಂದಿಗಾಗಲೀ ಸಂಬಂಧಿಸಿರುವದಿಲ್ಲ. ಅದು ಬಲಹೀನರನ್ನು ಯುವಕರನ್ನು ಇಲ್ಲವೇ ಪ್ರಬುದ್ಧರಾಗಿದವರನ್ನು ಹೊರತು ಪಡಿಸಿರುವದಿಲ್ಲ. ಅದು ಪ್ರತಿಯೊಬ್ಬರನ್ನು ಆ ಸಮಯದಲ್ಲಿ ಎಲ್ಲಿದ್ದರೋ ಅಲ್ಲಿಂದ ಪ್ರಾರಂಭಿಸಿ, ಯೇಸುವಿನ ದಿಕ್ಕಿನ ಕಡೆಗೆ ನಡೆಯ ಬೇಕೆಂದು ಕರೆಯುತ್ತದೆ. ಪೇತ್ರನು ಬಹಳ ದೂರ ಬಂದಿದ್ದನು, ಆದರೆ ದೊಡ್ಡ ಅಂತರದಲ್ಲಿ ಬಿದ್ದಿದ್ದನು. ತನ್ನ ಜಯದಲ್ಲಿ ಮತ್ತು ತನ್ನ ಅವಘಡದಲ್ಲಿ ಯೇಸುವಿನಿಂದ ಪೇತ್ರನಿಗೆ ಕರೆಯು: “ನನ್ನನ್ನು ಹಿಂಬಾಲಿಸು!” ಈ ನೇರವಾದ ಆಜ್ಞೆಯು ಇಂದಿಗಾಗಿ ಯೇಸುವಿನ ಕರೆಯಾಗಿದೆ.

## ಮುಕ್ತಾಯ

ನೀನು ಇನ್ನೂ ಕ್ರೈಸ್ತನಾಗಿರದಿದ್ದರೆ, ಮಾರ್ಗವು ಸರಳವಾಗಿದೆ ಮತ್ತು ಸುಲಭವಾಗಿದೆ. "ನಂಬಿಕೆ" ಇಲ್ಲವೇ "ವಿಶ್ವಾಸ"[2] ಎಂದು ಬೈಬಲ್ ಕರೆಯುವದರೊಂದಿಗೆ ಅದು ಪ್ರಾರಂಭವಾಗುತ್ತದೆ. ವಿಶ್ವಾಸವು ಯೇಸುವಿನಲ್ಲಿ ನಮ್ಮ ನಂಬಿಕೆಯನ್ನಿಡುವದನ್ನು ಮತ್ತು ಆತನ ಚಿತ್ತಕ್ಕೆ ಸಮರ್ಪಿಸಿಕೊಳ್ಳುವದನ್ನು ಒಳಗೊಂಡಿದೆ ವಿಶ್ವಾಸವು ತನ್ನನ್ನು ಮನಸಾಂತರದಲ್ಲಿ ವ್ಯಕ್ತಪಡಿಸಿಕೊಳ್ಳುತ್ತದೆ (ಪಾಪದಿಂದ ಹಿಂದಿರುಗಿ ದೇವರ ಕಡೆಗೆ ತಿರುಗಿಕೊಳ್ಳಲು ತೀರ್ಮಾನ)[3] ಮತ್ತು ಯೇಸುವು "ಕರ್ತನಾಗಿದ್ದಾನೆ"[4] ಎಂಬ ಅರಿಕೆ. ಯೇಸುವನ್ನು ಹಿಂಬಾಲಿಸಲು ಈ ಸ್ಮರಣೀಯವಾದ ತೀರ್ಮಾನವು ಬಾಪ್ತಿಸ್ಮದ ಸುಂದರವಾದ ಕೃತ್ಯದಲ್ಲಿ ಮುದ್ರಿಸಲ್ಪಟ್ಟು ವ್ಯಕ್ತಪಡಿಸಲ್ಪಡುತ್ತದೆ.[5]

ನಮ್ಮ ಹೃದಯಗಳಲ್ಲಿ ವಿಶ್ವಾಸವನ್ನು ಹುಟ್ಟಿಸಲು ಯೋಹಾನನು ಈ ಸುವಾರ್ತೆಯಲ್ಲಿ ಬರೆದನು (20:30, 31). ಅದರ ಉದ್ದೇಶಿತ ಪರಿಣಾಮವು ನಿನ್ನ ಹೃದಯದಲ್ಲಿ ಆಗಿರುವುದೋ? ನೀನು ಯೇಸುವಿನಲ್ಲಿ ನಂಬುವಿಯೋ? ನೀನು ಕ್ರೈಸ್ತನಾಗಿರುವಿಯೋ? ಈ ಪಯಣದಿಂದ ನಿನ್ನ ವಿಶ್ವಾಸವು ಬಲಪಡಿಸಲ್ಪಟ್ಟಿದೆಯೋ? ಹಾಗಿದ್ದರೆ, "ಆತನ ಹೆಸರಿನಲ್ಲಿ ನಮಗೆ ಜೀವ ಇದೆ" ಎಂದು ಯೇಸುವು ನಿಜವಾಗಿಯೂ ಆನಂದಿಸುತ್ತಾನೆ.

---

ಟಿಪ್ಪಣಿಗಳು

[1]1 ಕೊರಿಂಥ 13:4-7 ಅಗಾಪೆಯ ಅತ್ಯುತ್ತಮವಾದ ವಿವರಣೆಯಾಗಿದೆ. [2]ಯೋಹಾನ 3:16; ಮಾರ್ಕ 16:16; ಅಪೊಸ್ತಲರ ಕೃತ್ಯಗಳು 16:31-34. [3]ಮತ್ತಾಯ 4:17; ಲೂಕ 13:3; ಅಪೊಸ್ತಲರ ಕೃತ್ಯಗಳು 2:38; 17:30. [4]ಯೋಹಾನ 20:28; ಮತ್ತಾಯ 10:32; ರೋಮಾಪುರ 10:9, 10. [5]ಯೋಹಾನ 4:1; ಅಪೊಸ್ತಲರ ಕೃತ್ಯಗಳು 2:38; 8:38; ರೋಮಾಪುರ 6:4-6; ಗಲಾತ್ಯ 3:27; ಕೊಲೊಸ್ಸೆ 2:12.